ಶ್ರೀ ವಿ. ವೆಂಕಟಪ್ಪ.—1956ನೆಯ ಇಸವಿ ಮೇ 11ನೇ ತಾರೀಖಿನಿಂದೀಚೆಗೆ ಸೇರ್ಕಡ 3 ರಷ್ಟು ಆದಾಯ ಬಾರದೇ ಹೋದರೆ ಮಂಜೂರು ಮಾಡಕೂಡದೆಂದು ಹೇಳಿದೆ. ಅದಕ್ಕಿಂತ ಹಿಂದೆ ಹಾಗೆ ನಿಯಮವಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಪಬ್ಲಿಕ್ ವರ್ಕ್ಸ್ ಕೋಡಿನಲ್ಲಿ ಶೇಕಡ ಮೂರಕ್ಕಿಂತ ಕಡಮೆ ಆದಾಯ ಬರುವುದಾದರೆ ಕೆಲಸ ತೆಗೆದುಕೊಳ್ಳಕೂಡದೆಂದು ಹೇಳಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿ ಒಂದು ಆಡ್ಜೆಸ್ಟಿಜರಿ ಕಾರಣವಿದೆ.

ಶ್ರೀ ವಿ. ವೆಂಕಟಪ್ಪ.—ಇದು ಹೊಸದೇನೂ ಅಲ್ಲ. ಪರಿಶಿಷ್ಟದಲ್ಲಿ ನಮೂದಿಸಿರುವ ಮೂರು ಪ್ರಾಜೆಕ್ಟುಗಳು ಹಿಂದಿನವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ವೆಂಕಟಪ್ಪ.—ಅದಕ್ಕಿಂತ ಈಚೆಗೆ ಆಗಿರುವ ಎಸ್ಟಿಮೇಟನ್ನು ಮಂಜೂರು ಮಾಡಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿರಬಹುದು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಪರಿಶಿಷ್ಟದಲ್ಲಿರುವ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ತೊಂದರೆ ಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಲ್ಪ ಹೆಚ್ಚು ಕಡಮೆಯಾದ್ದರೆ ಸ್ವಲ್ಪ ಲೀನಿಯಂಟಾಗಿ ತೆಗೆದುಕೊಂಡಿದೆ, ಬಹಳ ಹೆಚ್ಚು ಕಡಮೆಯಾದ್ದರೆ ಕೈ ಬಿಟ್ಟಿದೆ.

ಶ್ರೀ ವಿ. ವೆಂಕಟಪ್ಪ.—ಲಂಗೋಜಿ ಹಳ್ಳಕ್ಕೆ ಅಡ್ಡಲಾಗಿ ರಿಜರ್ವಾಯರನ್ನು ಕಟ್ಟುವ ಅಂದಾಜಿನ ಮೇರೆ ಶೇಕಡ 2·5 ರಷ್ಟು ವರಮಾನವಿದೆ. ಅದನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಪುನಃ ವಿಚಾರ ಮಾಡುತ್ತೇವೆ.

Vaduvinakatte near Maddur (Construction).

Q.—688. Sri SHIVANANJE GOWDA (Mysore Taluk).—

Will the Government be pleased to state :—

(*a*) whether they would commence the construction work of Vaduvinakatte near Maddur, Kallahalli, out of the irrigation works sanctioned in Mysore Taluk ;

(*b*) the reasons for not taking up this work ;

(*c*) whether they would take up the said work during the current year ?

A.—Sri A. G. RAMACHANDRA RAO (Minister for Law and Education).—

(*a*) and (*b*) The Project is under investigation.

(*c*) Not possible at this stage.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಮದ್ದೂರು, ಕಲ್ಲಹಳ್ಳಿ, ಬಳಿ ಅಣೆಕಟ್ಟು ಕಟ್ಟಬೇಕೆಂದು ಸುಮಾರು ನಾಲ್ಕು ವರ್ಷಗಳಿಂದ ಕೇಳುತ್ತಿದ್ದರೂ ಸಾಧ್ಯವಿಲ್ಲವೆಂದು ಉತ್ತರ ಹೇಳುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—" The project is under investigation " ಎಂದು ಉತ್ತರ ಕೊಟ್ಟಿದೆ.

ಶ್ರೀ ಶಿವನಂಜೇಗೌಡ.—ಹಿಂದಿನ ಅಸೆಂಬ್ಲಿ ಅಧಿವೇಶನದಲ್ಲಿ ಜಾಗ್ರತೆಯಾಗಿ ಮಾಡುತ್ತೇವೆಂದು ಜವಾಬು ಕೊಟ್ಟು ಈ ವರ್ಷ ಅದು ಸಾಧ್ಯವಿಲ್ಲವೆಂದು ಹೇಳಲು ಕಾರಣವೇನು, ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡು ಪ್ರಾಜೆಕ್ಟುಗಳಿವೆ. ಒಂದು ಎಡುವಿನ ಕಟ್ಟೆ, ಇನ್ನೊಂದು ಹೆಮ್ಮರಗಳ್ಳಿ ಕಟ್ಟೆ. ಹೆಮ್ಮರಗಳ್ಳಿ ಕಟ್ಟೆಯಿಂದ ಅನುಕೂಲ ವಿಲ್ಲ, ಎಡುವಿನಕಟ್ಟೆ ಕಾಮಗಾರಿ ಕೈಕೊಳ್ಳುವುದು ಸೂಕ್ತ ಎಂದು ಶಿಫಾರ್ಸಾಗಿದೆ.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಹೆಮ್ಮರಗಳ್ಳಿ ಕಟ್ಟೆಯಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಿಂದ ಮೈಸೂರು ತಾಲ್ಲೂಕಿಗೆ ಅನುಕೂಲವಾಗುತ್ತದೆ.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕು ಅಭಾವ ಪ್ರದೇಶ, ಮೈಸೂರು ಜಿಲ್ಲೆ ಬಹಳ ಹೀನ ಸ್ಥಿತಿಯಲ್ಲದೆ, ಈ ಕೆಲಸ ಆಗಬೇಕೆಂದು ಕೇಳಿದಮೇಲೆ ಎರಡು ಸಾರಿ ಮಾಡುತ್ತೇವೆಂದು ಹೇಳಿ ಈಗ ಮಾಡುವುದಿಲ್ಲವೆಂದು ಹೇಳಿದರೆ ಹೇಗೆ ? ನಾಲ್ಕು ಅಧಿವೇಶನಗಳಲ್ಲಿ ಹಿಂದೆ ಈ ವಿಚಾರ ಬಂದಿತ್ತು. ಆದ್ದರಿಂದ ಕಷ್ಟ ಪರಿಸ್ಥಿತಿಯಿರುವಾಗ ನಣ್ಣ ಕೆಲಸ ಮಾಡಿದರೆ ಜನರು ಅನ್ನ, ಬಟ್ಟೆಯಿಲ್ಲದೆ ಸಾಯುತ್ತಿರುವಾಗ ಅನುಕೂಲವಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲಿಸುತ್ತೇವೆ.

Vidhana Soudha

9 A.M.

Q.—721. Srimathi LAKSHMIDEVI RAMANNA (Hoskote-Aneka).—

Will the Government be pleased to state.—

(*a*) the total amount spent so far for the construction of Vidhana Soudha ;

(*b*) whether it is a fact that sandalwood doors have been prepared for the above building ;

(*c*) if so, the number of doors prepared ; and the amount spent for each one of them ?

A.—Sri A. G. RAMACHANDRA RAO (Minister for Law and Education).—

(*a*) Rs. 1,25,19,179 up to the end of July 1956.

(b) No; only Sandalwood veneering has been done in the case of one door.

(c) The cost of veneering in the one case referred to is about Rs. 10,000.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ತಾವೀಗ ವಿಧಾನಸೌಧದ ಕಟ್ಟಡಕ್ಕೆ ಈಗಾಗಲೇ 1,25,19,179 ರೂಪಾಯಿಗಳು ಖರ್ಚಾಗಿರುತ್ತವೆಂದು ಉತ್ತರದಲ್ಲಿ ತಿಳಿಸೋಣವಾಗಿದೆ. ಹಾಗಾದರೆ ಈ ಕಟ್ಟಡವನ್ನು ಪೂರ್ತಿಯಾಗಿ ಕಟ್ಟಿ ಮುಗಿಸಬೇಕಾಗಿದ್ದರೆ ಇನ್ನೂ ಎಷ್ಟು ಹಣ ಬೇಕಾಗುತ್ತದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲು ಈ ಕಟ್ಟಡಕ್ಕೆ 1 ಕೋಟಿ 30 ಲಕ್ಷ ರೂಪಾಯಿಗಳ ಅಂದಾಜಾಗಿತ್ತು.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹಾಗಾದರೆ ಇನ್ನು ಳಿದಿರತಕ್ಕ ಕೆಲಸಗಳೆಲ್ಲಾ ಈ 5 ಲಕ್ಷ ರೂಪಾಯಿಗಳಲ್ಲೇ ಮುಗಿಯುತ್ತದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೊಂದು ವೇಳೆ ಅದಕ್ಕಿಂತಲೂ ಹೆಚ್ಚಿಗೆ ಹಣ ಖರ್ಚಾದರೆ ಆಗ ತಮ್ಮ ಮುಂದೆ ಆ ಬಗ್ಗೆ ಸಪ್ಲಿಮೆಂಟರಿ ಗ್ರಾಂಟಿಗೆ ಮನವಿ ಬಂದೇ ಬರುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈ ವಿಧಾನ ಸೌಧದಲ್ಲಿ ಬಾಗಿಲುಗಳಿಗೆ ಗಂಧಮರದ ಲೇಪನ ಮಾಡಲು ಗಂಧದ ಇಲಾಖೆಯಿಂದ ಎಷ್ಟು ಮೌಲ್ಯದ ಗಂಧದ ಮರಗಳನ್ನು ತರಿಸಲಾಗಿದೆ ಎನ್ನುವುದನ್ನು ತಿಳಿಸುವಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹೋಗಲಿ, ಆ ಗಂಧದಮರಗಳನ್ನು ತರಿಸಲು ಎಷ್ಟು ಹಣ ಖರ್ಚಾಯಿತು ಎನ್ನುವುದನ್ನಾದರೂ ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೇಳುತ್ತೇನೆ. ಆದರೆ ತಪಶೀಲುಗಳನ್ನೆಲ್ಲಾ ವಿಚಾರ ಮಾಡಿಕೊಂಡು ಹೇಳಬೇಕಾಗಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ಆ ಸೊರಬ-ಸಾಗರಗಳಿಂದ ಸುಮಾರು 40-45 ಜನ ಗುಡಿಗಾರರು ಬಂದು ಇಲ್ಲಿ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದು ನಿಜವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದರೆ ಕರಾರು ವಾಕ್ಕಾಗಿ ಇಷ್ಟೇ ಜನರೆಂದು ಗೊತ್ತಿಲ್ಲ. ಅಂತೂ ಕೆಲವರೇನೋ ಬಂದಿದ್ದಾರೆ; ಕೆಲಸ ಮಾಡುತ್ತಿದ್ದಾರೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ಸುಮಾರು 20 ಬಾಗಿಲುಗಳವರೆಗೆ ಈ ಗಂಧದ ಮರದ ಲೇಪನಮಾಡಿರತಕ್ಕಂಥ ಬಾಗಿಲುಗಳು ತಯಾರಾಗಿರುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಬಾಗಿಲೆಂದು ಈಗ ಗೊತ್ತಾಗಿದೆ. ಆದರೆ ತಾವೀಗ ಕೇಳುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡಿ ಹೇಳುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹಾಗೊಂದು ವೇಳೆ ತಾವು ಹೇಳುತ್ತಿರುವ ಪ್ರಕಾರ ಒಂದು ಬಾಗಿಲಿಗಿಂತ ಹೆಚ್ಚು ಬಾಗಿಲುಗಳನ್ನು ಗಂಧದ ಲೇಪನಮಾಡಿ ತಯಾರಿಸಿಟ್ಟಿದ್ದರೆ ಅವುಗಳನ್ನೆಲ್ಲ ಏತಕ್ಕೆ ಉಪಯೋಗ ಮಾಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೂ ಪರ್ಯಾಲೋಚನೆ ಮಾಡಬೇಕಾಗುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹೀಗೆ ಬಾಗಿಲುಗಳಿಗೆ ಗಂಧದಮರದ ಲೇಪನಮಾಡಿಸಲು ಯಾರು ಸಲಹೆಯಿತ್ತದ್ದು? ಏನು ವಿಧಾನಸೌಧದ ಸ್ಪೆಷರ್ ಇಂಜಿನಿಯರ್ ಅವರು ಸಲಹೆಮಾಡಿದ್ದರೋ, ಅಥವಾ ಪಿ. ಡಬ್ಲ್ಯು. ಡಿ. ಮಂತ್ರಿಗಳೇನಾದರೂ ಸಲಹೆ ಕೊಡಿದ್ದರೋ ಅಥವಾ ಸರ್ಕಾರದ ಆರ್ಕಿಟೆಕ್ಟರೇನಾದರೂ ಇಂಥ ಡಿಸೈನ್ ಇರಬೇಕೆಂದು ಈ ಪ್ರಪೋಜಲನ್ನು ಮಾಡಿದ್ದಾರೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಒಂದು ಬಾಗಿಲಿಗೆ ಗಂಧದಮರದ ವೆನೀರಿಂಗ್ ಮಾಡಲಾಗಿದೆಯೆಂದೂ ಅದಕ್ಕಾಗಿ 10,000 ರೂಪಾಯಿಗಳು ವೆಚ್ಚವಾಗಿವೆಯೆಂದೂ ತಿಳಿದುಬಂದಿದೆ. ತಾವು ಕೇಳುತ್ತಿರುವ ಬಾಕಿ ವಿಚಾರಗಳ ಬಗ್ಗೆ ಆಪಗಳನ್ನೆಲ್ಲಾ ವಿಚಾರ ಮಾಡಿ ತಿಳಿಸುವುದಾಗಿ ಆಗಲೇ ಉತ್ತರಕೊಟ್ಟಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ದೇವರೇ! ಈ ಒಂದು ಬಾಗಿಲಿಗೆ ಆಗಿರತಕ್ಕಂಥ 10,000 ರೂಪಾಯಿಗಳ ವೆಚ್ಚ ಒಂದು ಬಡ ಸಂಸಾರವನ್ನು ಉದ್ಧಾರವಾಡ ಬಹುದಿತ್ತಲ್ಲವೇ!

(ಉತ್ತರವಿಲ್ಲ)

ಶ್ರೀ ಆರ್. ಅನಂತರಾಮಯ್ಯ.—ಈಗ ಆ ವಿಧಾನ ಸೌಧದ ಸೆಂಟರಿನಲ್ಲಿರುವ ಡೂಮಿನ ಕೆಲಸ ಏಕೆ ನಿಂತು ಹೋಗಿದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲು ಮಾಡಿದ್ದ ಅಂದಾಜಿನ ಪ್ರಕಾರ ಅದರಿಂದ ಕಟ್ಟಡಕ್ಕೆ ಭಾರ ಹೆಚ್ಚಾಗುತ್ತದೆಂದೂ, ಅಷ್ಟೇ ಅಲ್ಲದೆ ಖರ್ಚು ಸಹ ಜಾಸ್ತಿಯಾಗುತ್ತದೆಂದೂ, ಆ ಕಾರಣಗಳಿಂದ ಅದಷ್ಟುಮಟ್ಟಿಗೂ ಅದರ ಅಂದ-ಚಂದಗಳಿಗೆ ಅಂಚಣೆ ಉಂಟಾಗದ ಹಾಗೆ ಈಗ ಬಂದಿರತಕ್ಕ ಸಲಹೆಯ ಪ್ರಕಾರ ಈಗ ಆ ಡೂಮಿನ ಎತ್ತರದಲ್ಲಿ 18 ಅಡಿ ಕಡಿಮೆಯಾಗುತ್ತದೆಂದು ತಿಳಿದು ಬಂದಿದೆ. ಹೀಗೆ ಮಾಡಿದರೆ ಕಟ್ಟಡಕ್ಕೆನೂ ತೊಂದರೆಯಾಗುವುದಿಲ್ಲ ವೆಂದು ಸಲಹೆ ಮಾಡಿದ್ದಾರೆ.

Sri R. ANANTARAMAN.- Is it a fact that the work of this central dome is stopped on account of the advice coming from outside engineers who are coming into the State shortly?

Sri A. G. RAMACHANDRA RAO.— I have already given the reasons as to why it had to be reconsidered. The stoppage was ordered to enable the Committee to go into the matter and make proposals.

ಶ್ರೀ ಆರ್. ಅನಂತರಾಮಯ್ಯ.—ಈಗಾಗಲೇ ಈ ಡೂಮಿಗೆ ಬೇಕಾಗುವಂಥ ಕಲ್ಲುಗಳನ್ನೆಲ್ಲಾ ಪೂರ್ತಿ ಸಿದ್ಧಗೊಳಿಸಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಈ ಕಟ್ಟಡದ ಪಟ್ಟದ ಬಗ್ಗೆ ಇನ್ನೂ ರಿವೈಸ್ಡ್ ಎಸ್ಟಿಮೇಟು ತಯಾರಾಗಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಇನ್ನೂ ನಮ್ಮ ಮುಂದೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದರೆ ತಾವು ಹಣವನ್ನು ಪೂರ್ತಿಯಾಗಿ ಖರ್ಚುಮಾಡಿದನಂತರವೇ ಈ ಅಂದಾಜನ್ನು ತಯಾರಿಸಬೇಕೆಂದು ಇದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲ ಆಗತಕ್ಕ ಖರ್ಚನ್ನು ನಾವು ಈಗಲೇ ಇಷ್ಟೇ ಎಂದು ಹೇಗೆ ಹೇಳುವುದಕ್ಕಾಗುತ್ತದೆ!

ಶ್ರೀ ಬಿ. ಹುಚ್ಚೇಗೌಡ.—ಅಂದಾಜಿನ ಪ್ರಕಾರ ಇಷ್ಟೆರವರೆಗೆ ವೆಚ್ಚ ಆಗಬಹುದೆಂದಾದರೂ ತಿಳಿಸಬಹುದಲ್ಲವೇ? ಎಲ್ಲಿಯವರೆಗೆ ಈ ವೆಚ್ಚಗಳು ಹೋಗುತ್ತವೆಂದು ಏಕೆ ತಿಳಿಸಬಾರದು?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಅದನ್ನೆಲ್ಲಾ ಹೇಳುವುದಕ್ಕೆ ಹೇಗಾಗುತ್ತದೆ?

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಇಂಥ ಖರ್ಚು ವೆಚ್ಚಗಳ ವಿಚಾರದಲ್ಲಿ ಸರ್ಕಾರದವರ ನೀತಿಯೇನು, ನೇನುವೇನು, ಇಂಥ ವ್ಯವಹಾರದಲ್ಲಿ ಹೀಗೆಲ್ಲಾ ಖರ್ಚು ಮಾಡುವುದು ಆವಶ್ಯಕವೇ, ಅಥವಾ ಇಲ್ಲವೇ ಎನ್ನುವುದನ್ನಾದರೂ ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಯಮಗಳಿಗನುಸಾರವಾಗಿಯೇ ಕೆಲಸವನ್ನು ಮಾಡುತ್ತಿದ್ದಾರೆ.

Sri B. HUTCHE GOWDA.—Is the revised estimate under preparation?

Sri A. G. RAMACHANDRA RAO.—Yes.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ತಾವು ಮೊದಲು ಈ ಗಂಧದಮರದ ಬಾಗಿಲುಗಳನ್ನು ತಯ್ಯಾರು ಮಾಡತಕ್ಕ ಬಗ್ಗೆ ಅಂದಾಜು ತಯಾರು ಮಾಡಿರಲಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಗಂಧದ ಮರದ ಬಾಗಿಲುಗಳನ್ನು ಮಾಡಿರುವುದಿಲ್ಲ. ಗಂಧದಮರದ ಲೇಪನಮಾಡಿರತಕ್ಕ ಬಾಗಿಲುಗಳ ವಿಚಾರ ತಿಳಿಸಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ಬಾಗಿಲುಗಳಿಗೆ ಗಂಧದ ಮರದ ಲೇಪನಮಾಡಬೇಕೆಂಬ ವಿಚಾರ ಎಸ್ಟಿಮೇಟಿನಲ್ಲಿ ತಿಳಿಸಬೇಕಾಗಿತ್ತಲ್ಲವೇ!

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ನೋಡಿ ಹೇಳಬೇಕಾಗಿದೆ ಎಂದು ಆಗಲೇ ತಿಳಿಸಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಪ್ರಶ್ನೆಗೆ ಉತ್ತರ ಕೊಡತಕ್ಕ ಕಾಲದಲ್ಲಿ-ಎಷ್ಟು ಬಾಗಿಲು, ಖರ್ಚೆನ್ನು ಎನ್ನುವುದನ್ನು ತಿಳಿಸದೆ ಹೋದರೆ ಇವುಗಳಿಗೆ ಅಂದಾಜು ಮಾಡಿಲ್ಲವೆಂದು ಭಾವಿಸೋಣವೇ?

ಶ್ರೀ ಎ. ಜಿ. ರಾಮಚಂದ್ರರಾವ್. ಅದನ್ನೆಲ್ಲಾ ವಿಚಾರಮಾಡಿಕೊಂಡು ತಿಳಿಸಬೇಕಾಗಿದೆ. ಈಗ ಒಂದು ಬಾಗಿಲ ವಿಚಾರ ತಿಳಿಸಿದ್ದರು ಅದನ್ನು ಉತ್ತರದಲ್ಲಿ ತಿಳಿಸಿದೆ.

ಶ್ರೀ ಬಿ. ಹುಚ್ಚೇಗೌಡ.—ಈಗ ಅಲ್ಲಿ ನಿಲ್ಲಿಸಿರತಕ್ಕ ಕೆಲಸಗಳನ್ನು ಯಾರ ಸಲಹೆ ಮೇರೆಗೆ ಎಂದರೆ ಯಾವ ಚೆಕ್ಕಿಕರ್ ಜನರ ಅಭಿಪ್ರಾಯದಮೇರೆ ನಿಲ್ಲಿಸಲಾಗಿದೆ?

Sri A. G. RAMACHANDRA RAO.—I may state here that the question asked is, 'whether it is a fact that sandalwood doors have been prepared for the above building'. Clear answer has been given that what is done is only veneering.

ಶ್ರೀ ಜೆ. ಮಹಮದ್ ಇಮಾಂ.—ಈ 'ವೆನೀರಿಂಗ್' ಎಂದರೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಗಂಧದಮರವನ್ನು ಬಾಗಿಲಿಗೆ ಅಂಟಿಸುವುದು.

Sri J. MOHAMED IMAM.—Has the Minister gone and inspected the building?

Sri A. G. RAMACHANDRA RAO.—Yes.

Sri J. MOHAMED IMAM.—May I know what is meant by 'veneering'?

Sri A. G. RAMACHANDRA RAO.—It is in a sense putting or infilling any picture or design made in sandalwood, in to the door.

Sri J. MOHAMED IMAM.—What was the authority for payment of one crore and odd rupees?

Sri A. G. RAMACHANDRA RAO.—On the sanctioned authority of the Government.

Sri J. MOHAMED IMAM.—What kind of sanction? Was it sanction of the estimate or only verbal sanction?

Sri A. G. RAMACHANDRA RAO.—Hon'ble Member knows full well that the estimate for the work is examined and then sanctioned.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೊದಲು ಆ ಶಿಖರ ಎಷ್ಟು ಅಡಿ ಎತ್ತರವಿರಬೇಕೆಂದು ಅಂದಾಜು ಮಾಡಿದ್ದರು?

ಶ್ರೀ ಎ. ಜಿ. ರಾಮಚಂದ್ರರಾವ್.—190 ಅಥವಾ 192 ಅಡಿಗಳೆಂದು ಮಾಡಿದ್ದರು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಅಲ್ಲಿ ಕೆಲಸ ಬಹಳ ನಿಧಾನವಾಗುತ್ತಿದೆಯಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಪ್ರಶ್ನೆಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಆ ಶಿಖರದ ಎತ್ತರ ಎಷ್ಟಕ್ಕೆ ಏಳಿಸಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—170 ಅಡಿಗಳಿಗೆ ಏಳಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ತಾವು ತಿಳಿಸಿರುವ 10 ಸಾವಿರ ರೂಪಾಯಿಗಳ ಬಾಗಿಲು ಒಂದಿದೆಯಲ್ಲಾ ಅದು ಯಾವುದು, ಎಲ್ಲಿದೆ ಎನ್ನುವುದನ್ನು ತಿಳಿಸುತ್ತೀರಾ?

Sri A. G. RAMACHANDRA RAO.—The work is being done in the open.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಒಂದು ಬಾಗಿಲನ್ನು ಯಾವ ರೂಪಿಗೆ ಉಪಯೋಗಿಸಬೇಕೆಂದು ಆಲೋಚಿಸಿದ್ದೀರಿ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ?

Sri A. G. RAMACHANDRA RAO.—I want notice.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಈ ವಿಧಾನಸೌಧದ ವೆಚ್ಚದ ಬಗ್ಗೆ ಪರಿಶೀಲನೆಮಾಡಲು ಒಂದು ಸಮಿತಿಯನ್ನು ನೇಮಿಸಿರುತ್ತೀರಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಸಮಿತಿಯವರ ವರದಿಯು ತಮಗೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ನಮಗೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಅದು ಯಾವಾಗ ಬರುತ್ತದೆ?

Sri A. G. RAMACHANDRA RAO.—I cannot give any forecast of it.

ಶ್ರೀ ವಿ. ವೆಂಕಟಪ್ಪ.—ಒಂದು ಬಾಗಿಲಿಗೆ ಗಂಧದ ಮರದ ಲೇಪನ ಮಾಡಲು 10 ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ತಿಳಿಸಲಾಗಿದೆ. ಪೂರಾ ಬಾಗಿಲಿಗೆ ಆಗತಕ್ಕ ಒಟ್ಟು ವೆಚ್ಚವೆಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಮಾಡಿ ಹೇಳಬೇಕು.

ಶ್ರೀ ವಿ. ವೆಂಕಟಪ್ಪ.—35 ಸಾವಿರ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳುತ್ತಿದ್ದಾರೆ. ನಿಜವೇ ?

ಶ್ರೀ ಎ. ಜಿ ರಾಮಚಂದ್ರರಾವ್.—ಅದನ್ನು ವಿಚಾರಮಾಡಿ ಹೇಳಬೇಕು.

ಶ್ರೀ ವಿ. ವೆಂಕಟಪ್ಪ.—ಆ ಬಾಗಿಲಿಗೆ ಬರಿ ಗಂಧದ ಮರದ ಲೇಪನ ಮಾತ್ರ ಮಾಡಿದ್ದೀರೋ ಅಥವಾ ಅದರಲ್ಲೇ ಇ೯ಕಾರ್ವಿಂಗ್ ಮಾಡಿದ್ದೀರೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಕೆತ್ತನೆ ಮಾಡಿ ಅದನ್ನು ಜೋಡಿಸಿರಬಹುದು.

ಶ್ರೀ ವಿ. ವೆಂಕಟಪ್ಪ.—ಗಂಧದ ಮರದ ಇ೯ಲೇ ಘಾಡುವುದಲ್ಲದೆ ದಂತದ ಇ೯ಲೇ ಸಹ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೂ ಇದೆ.

ಶ್ರೀ ವಿ. ವೆಂಕಟಪ್ಪ.—ಒಟ್ಟು ಸುಮಾರು ಎರಡು ಕೋಟಿ ರೂಪಾಯಿಗಳವರೆಗೂ ಅಂದಾಜು ಆಗುತ್ತದೆಂದು ಈಗ ಹೇಳುತ್ತಿದ್ದಾರೆ. ಅದರಲ್ಲಿ ನಿಜಾಂಶವೇನಾದರೂ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಷಯ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—ವಿಧಾನಸೌಧದ ಬಹುಭಾಗ ಕೆಲಸ ಪೂರ್ತಿಸಿರುವುದರಿಂದ, ಮೊದಲು ಯಾವ ರೀತಿ ಕೆಲಸವಾಗಬೇಕೆಂದು ನಿರೀಕ್ಷಿಸಿತ್ತೋ ಅದೇ ರೀತಿ ಮಾಡಿ ಮುಗಿಸುವುದು ಸೂಕ್ತವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಿರುವ ಕೆಲಸವನ್ನು ಪೂರ್ತಿಸುವುದು ಸೂಕ್ತ. ಆದರೆ ಖರ್ಚನ್ನೂ ಗಮನದಲ್ಲಿಟ್ಟುಕೊಂಡು ಕೆಲಸಮಾಡಬೇಕು.

ಶ್ರೀ ಟಿ. ಸಿ. ಶಾಂತಪ್ಪ.—ಇದರ ಆರಂಭೋತ್ಸವ ಯಾವಾಗ ಮಾಡುತ್ತೀರಿ ?

ಅಧ್ಯಕ್ಷರು.—ಆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

Sri K. PUTTASWAMY.—May I know whether this estimate include, lighting, water supply and sanitary fittings ?

Sri A. G. RAMACHANDRA RAO.—Sanitary fittings ಮಾತ್ರ ಇದರಲ್ಲಿ ಸೇರಿರುತ್ತದೆ. Regarding Sanitary amenities inside the building they will be provided.

ಶ್ರೀ ಬಿ. ರಾಚಯ್ಯ.—ಆಗಿನ ಮರಾಮತ್ತು ಶಾಖೆ ಮಂತ್ರಿಗಳು ಇದರ ಅಂದಾಜುಗಳನ್ನು ತರಿಸಿಕೊಂಡು ಸ್ಕ್ರುಟಿನಿ ಮಾಡಿ ಮಂಜೂರು ಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿರುತ್ತಾರೆ.

Jayachamarajendra Institute of Indian Med cine (Shortage of drugs.)

Q.—681. Sri K. PUTTASWAMY (Srirangapatna).—

Will the Government be pleased to state :—

(*a*) (i) whether a notice has been put up in the Jayachamarajendra Institute of Indian Medicine stating that several drugs are not available in the hospital for dispensing ; (ii) the reason for the shortage of the drugs mentioned therein ;

(*b*) (i) whether it is a fact that the vessels used for the manufacture of those drugs have become unserviceable ; (ii) if so, when this matter was brought to the notice of the Department and a request made for supply of new vessels in time to avoid inconvenience to the public ;

(*c*) the reason for not supplying the vessels to the hospital for manufacture of medicines even though it was brought to the notice of the Head of the Department that the vessels were becoming unserviceable ?

A.—Sri T. CHANNIAH (Minister for Public Health and Local Self-Government).—

(*a*) (*i*) Yes.

(*ii*) For want of vessels which have become unserviceable on account of long usage, the drugs have not been compounded.

(*b*) (*i*) Yes.

(*ii*) It was brought to the notice of the department in the month of June 1956.

(*c*) The proposals are since recived. Action will be taken to accord sanction.

Sri K. PUTTASWAMY.—Is it not a fact that reports were being submitted drawing attention of the authorities that the vessels were fast becoming unserviceable ?

Sri T. CHANNIAH.—I have said, 'Yes.'

Sri K. PUTTASWAMY.—Why was not any action taken in time to prevent this difficulty, Sir ?

Sri T. CHANNIAH.—Action has been taken to get these vessels repaired and also to purchase new vessels. But while sending his recommendation, the Medical Officer of the Institute had not sent proper recommendation to the Head of the Department mentioning